



- ಮೇ ಸಂಚಿಕೆಯಲ್ಲಿ ಲೇಖಕ ಚಂದ್ರಕಾಂತ ಕುಸನೂರ ಅವರ ಸಂದರ್ಶನ (ರಹಮತ್ ತರೀಕೆರೆ) ಚೆನ್ನಾಗಿ ಮೂಡಿಬಂದಿದೆ. 'ಅವರು ನಮ್ಮ ಜೀವ ತಗೊಂಡರೇನು? ನಾವು ಅವರ ಜೀವ ತಗೊಂಡರೇನು? ಸಾಯೋದೆಲ್ಲ ಮನುಷ್ಯರೇ ಅಲ್ವಾ?' ಎನ್ನುವ ಮಾತು ಮನಮುಟ್ಟಿತು.

**ಇಂದಿರಾ ಮೋಟೆಬೆನ್ನೂರ, ಬೆಳಗಾವಿ**

- ಬಸು ಬೇವಿನಗಿಡದ ಅವರು ಅನುವಾದಿಸಿದ ಕತೆ 'ಒಳ್ಳೆಯ ಮನುಷ್ಯನನ್ನು ಹುಡುಕುತ್ತ...' ಓದಿಸಿಕೊಂಡು ಹೋಯಿತು.

**ರಾಜು ಹಿರೇಮಠ, ಚಡಚಣ**

- 'ನಾರಾಯಣಿ' (ಕೊಂಕಣಿ ಮೂಲ: ಮಹಾಬಳೇಶ್ವರ ಸೈಲ್, ಕನ್ನಡಕ್ಕೆ: ಶಾ.ಮಂ. ಕೃಷ್ಣರಾಯ) ಹಾಗೂ 'ಕೀಲುಗೊಂಬೆ' (ಕೇಶವರೆಡ್ಡಿ ಹಂದ್ರಾಳ) ಕತೆಗಳು ಒಂದಕ್ಕೊಂದು ಬೆಸೆದುಕೊಂಡಂತಿವೆ. ಸಂಭಾಷಣೆಗಳು ಚುರುಕಾಗಿವೆ.

**ಸುಂದರ್, ಬೆಂಗಳೂರು**

- ಮನಕಲಕುವ 'ನೀಲವ್ವ' (ವಿಕಾಸ್ ಆರ್. ಮೌರ್ಯ) ಕತೆ ಅತ್ಯುತ್ತಮವಾಗಿತ್ತು.

**ರಾಧಾ ಪಾಟೀಲ, ಸೇಡಂ**

- ಚಂದ್ರಕಾಂತ ಕುಸನೂರರಂಥ ಎಲೆಮರೆಯ ಪ್ರತಿಭಾವಂತರ ಸಂದರ್ಶನ ಸ್ತುತ್ಯರ್ಹ. 'ಮಳೆ ಮತ್ತೂ ಜೋರಾಗಲಿ' (ಪ್ರಸಾದ್ ಶೆಣೈ ಆರ್.ಕೆ.) ಹೃದಯಂಗಮ ಕತೆ. 'ಒಳ್ಳೆಯ ಮನುಷ್ಯನನ್ನು ಹುಡುಕುತ್ತ...', 'ನಾರಾಯಣಿ' ಕತೆಗಳು ಮಾರ್ಮಿಕವಾಗಿದ್ದವು.

**ಎಂ.ಎಸ್. ರಮೇಶ್, ಪುತ್ತೂರು**

- ಕರ್ಕಿ ಕೃಷ್ಣಮೂರ್ತಿಯವರ 'ಸಮಾಧಿ ಶಿವು' ಕಥೆ ಕಣ್ತೆರೆಸಿತು. ಮೊಗಳ್ಳಿ ಗಣೇಶ್ ಅವರ 'ಹರೆಯ ಉರಿವ ಹೊತ್ತು' ಕತೆಯಲ್ಲಿನ ಹರೆಯದ ಮನಗಳ ತುಡಿತ–ಮಿಡಿತಗಳ ಚಿತ್ರಣ ಆಪ್ತವಾಗಿದೆ.

**ರಾಜು ಹಗ್ಗದ, ಇಣಚಗಲ್**

- ಈ ಸಂಚಿಕೆಯ ಪ್ರಬಂಧಗಳು ಒಂದಕ್ಕಿಂತ ಒಂದು ವಿಭಿನ್ನವೂ ವಿಶಿಷ್ಟವೂ ಆಗಿದ್ದವು. ತೇಜಶ್ರೀ ಅವರ 'ಚರ್ಚಿಲ್, ಉಣ್ಣಿ ಮತ್ತು ಕವಿತೆ' ನಮ್ಮದೇ ಮನೆಯ ಕತೆಯಂತೆ ಆಪ್ತ ಭಾವ ಹುಟ್ಟಿಸಿತು.

**ಅರವಿಂದ ಬಿರಾದಾರ, ವಿಜಯಪುರ**

- 'ನನ್ನ ಓದು' ಅಂಕಣದ ನರೇಂದ್ರ ಪೈ ಅವರ ಲೇಖನ 'ಹಲವು ಕಥಾನಕಗಳ ನಿರೂಪಣೆ' ತುಂಬ ಚೆನ್ನಾಗಿದೆ. ಒಂದು ತಪ್ಪು ಮಾಹಿತಿ ಅದರಲ್ಲಿದೆ. ವಿದೇಶದಲ್ಲಿ ಕಲಿಯಲು ವಿದ್ಯಾರ್ಥಿವೇತನ ಕೊಟ್ಟಿದ್ದು ಇಂಗ್ಲೆಂಡ್‌ನಲ್ಲಿ ವೈದ್ಯವೃತ್ತಿ ಮಾಡುತ್ತಿದ್ದ ಗಾಂಧಿ ಅವರ ಗೆಳೆಯ ಡಾ. ಪಿ.ಜೆ. ಮೆಹತಾ ಎಂಬುವರು. ಲೇಖನದಲ್ಲಿ ಹೇಳಿರುವಂತೆ ಬ್ರಿಟಿಷ್ ಸರ್ಕಾರವಲ್ಲ.

**ಪ್ರಭಾಕರ ಮ. ನಿಂಬರಗಿ, ಕಲಬುರ್ಗಿ**